ಲೋಕಯುಕ್ತ ಪ್ರಕರಣಗಳು

2463 (2611) **ಶ್ರೀ ಸುರೇಶ್ ಕುಮಾರ್ ಎಸ್.** (ರಾಜಾಜಿನಗರ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಲೋಕಾಯುಕ್ತರ ಮುಂದೆ ಇರುವ ಪ್ರಕರಣಗಳೆಷ್ಟು ;

ಆ) ಕಳೆದ 5 ವರ್ಷಗಳಲ್ಲಿ ಸರ್ಕಾರಿ ನೌಕರರು : ಅಧಿಕಾರಿಗಳ ಮನೆ ಮೇಲೆ ದಾಳಿ ಮಾಡಿರುವ ಅಥವಾ ಅವರು ಲಂಚ ಸ್ವೀಕರಿಸುತ್ತಿದ್ದಾಗ ಸಿಕ್ಕಿಬಿದ್ದಿರುವ ಪ್ರಕರಣಗಳು ಎಷ್ಟು ; (ವಿವರ ನೀಡುವುದು)

ಇ) ಸರ್ಕಾರಿ ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ದಾಳಿ ಮಾಡಿ ಅವರು ಅಕ್ರಮ ಆಸ್ತಿ ಸಂಪಾದಿಸಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಗೋಚರವಾದಾಗ ಅಥವಾ ಅವರು ಲಂಚ ಪಡೆಯುವಾಗ ನೇರವಾಗಿ ಸಿಕ್ಕಿಬಿದ್ದಾಗ, ಸರ್ಕಾರ ಅವರ ಮೇಲೆ ಕೂಡಲೇ ಕೈಗೊಂಡಿರುವ ಕ್ರಮವೇನು;

ಈ) ಇಂತಹ ಪ್ರಕರಣಗಳಲ್ಲಿ ಸಿಬ್ಬಂದಿ ವರ್ಗ ಸಿಕ್ಕಿಬಿದ್ದರೂ ಕ್ರಮ ತೆಗೆದುಕೊಳ್ಳದೇ ಇರುವ ಪ್ರಕರಣಗಳೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) 1735 ವಿವಿಧ ಪ್ರಕರಣಗಳು ಬಾಕಿ ಇರುತ್ತವೆ. ವಿವರಗಳನ್ನು ಈ ಕೆಳಗೆ ಒದಗಿಸಿದೆ.

1)	ಭ್ರಷ್ಟಾಚಾರ ತಡೆ ಅಧಿನಿಯಮ 1988ರ ಅಡಿಯಲ್ಲಿ ಬರುವ ಬಿದ್ದ ಪ್ರಕರಣಗಳು	274
2)	ಭ್ರಷ್ಟಾಚಾರ ತಡೆ ಅಧಿನಿಯಮ 1988ರ ಅಡಿಯಲ್ಲಿ ದಾಳಿ ಮಾಡಿದ ಪ್ರಕರಣಗಳು	109
3)	ಭ್ರಷ್ಟಾಚಾರ ತಡೆ ಅಧಿನಿಯಮ 1988ರ ಹಾಗೂ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ನೋಂದಾಯಿಸಿದ ಪ್ರಕರಣಗಳು	59
4)	ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಸೆಕ್ಷನ್ 7(2) ರ ಪ್ರಕಾರ ಪ್ರಕರಣಗಳು	911
5)	ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ.) ನಿಯಮ, 1957ರ 14-ಎರ ಅಡಿಯಲ್ಲಿನ ಪ್ರಕರಣಗಳು	374
6)	ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ.) ನಿಯಮ, 11(2)ರ ಅಡಿಯಲ್ಲಿನ ಪ್ರಕರಣಗಳು	68
	ಒಟ್ಟು	1735

ಅ) 1166 ಪ್ರಕರಣಗಳು

ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ.ಸಂ.		1996	1997	1998	1999	2000	ಒಟ್ಟು
1)	ಬಲಿಗೆ ಬಿದ್ದ ಪ್ರಕರಣಗಳು	260	245	203	102	185	1085
2)	ದಾಳಿ ಪ್ರಕರಣಗಳು	15	08	07	20	31	81
						ಒಟ್ಟು	1166

ಇ), ಈ) ಲೋಕಾಯುಕ್ತದ ಶಿಫಾರಸ್ಸುಗಳನ್ನು ಪರಿಶೀಲಿಸಿ, ಸಕ್ಷಮ ಪ್ರಾಧಿಕಾರಗಳು ಕ್ರಮ ಜರುಗಿಸುತ್ತಿವೆ. ಕೇಂದ್ರೀಕೃತ ಮಾಹಿತಿ ಕೂಡಲೇ ಲಭ್ಯವಿಲ್ಲ.

ಚಿಕ್ಕನಾಯಕನ ಹಳ್ಳಿ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಹಳ್ಳಿಗಳು

2464 (2845) ಶ್ರೀ ಸುರೇಶ್‌ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕ ಪಡೆಯದೆ ಇರುವ ಹಳ್ಳಿಗಳು ಎಷ್ಟಿವೆ;

ಆ. ಈ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕವನ್ನು ಎಷ್ಟು ದಿನಗಳಲ್ಲಿ ಸರ್ಕಾರ ಕಲ್ಪಿಸಲಾಗುವುದು.

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :—

ಅ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 1991ರ ಜನಗಣತಿ ಪ್ರಕಾರ ಜನವಸತಿಯಿರುವ 226 ಕಂದಾಯ ಗ್ರಾಮಗಳಿದ್ದು, ಈ ಎಲ್ಲಾ ಕಂದಾಯ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿರುತ್ತದೆ.

ಆ. ಉದ್ಭವಿಸುವುದಿಲ್ಲ.

ಚಿಕ್ಕನಾಯಕನಹಳ್ಳಿ ಕ್ಷೇತ್ರದ ಗ್ರಾಮಾಂತರ ಪ್ರದೇಶದ ವಿದ್ಯುತ್ ಪರಿವರ್ತಕಗಳ ಬದಲಾವಣೆ

2465(2846) ಶ್ರೀ ಸುರೇಶ್‌ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.